ಶ್ರೀ ಹೆಚ್. ಬಿ. ಜ್ವಾಲನಯ್ಯ.—ಈ ಗ್ರಾಮದಲ್ಲಿ 144ನೇ ಸೆಕ್ಷನ್ ಉಪಯೋಗಿಸಲು ಇದ್ದಂತಹ ಕಾರಣಗಳೇನು ?

† ಶ್ರೀ ವೀರೇಂದ್ರ ಪಾಟೀಲ್.—ಈ ಹಳ್ಳಿಯವರು ಇಲ್ಲಿ ನಾಟಕವಾಡಬೇಕು ಎಂದು ಇದ್ದರು. ಈ ಹಳ್ಳಿಯಲ್ಲಿ ಎರಡು ಪಾರ್ಟಿಗಳಿದ್ದವು. ಇಲ್ಲಿನ ಜನರು ಒಂದು ನಾಟಕವಾಡಬೇಕೆಂದು ನಿರ್ಣಯ ಮಾಡಿದಂತೆ ನಾಟಕ ಆರಂಭವಾಗುವುದಕ್ಕೆ ಮುನ್ನ ಕೆಲವು ಪಾತ್ರಧಾರಿಗಳು ಮಧ್ಯದಲ್ಲಿ ಬರುವುದಿಲ್ಲ ಎಂದಾಗ ಇಲ್ಲಿದ್ದ ಎರಡು ಪಾರ್ಟಿಗಳವರಿಗೂ ಜಗಳವಾಗುವ ಸಂಭವ ಇತ್ತು. ಇದರಿಂದ ಇಲ್ಲಿನ ಜನರಿಗೆ ಒಂದು ರೀತಿಯಾದ ಘರ್ಷಣೆಯಾಗುವ ಸಂಭವ ಇದೆ ಎಂದು ಇಲ್ಲಿನ ಅಧಿಕಾರಿಗಳಿಗೆ ತಿಳಿದು ಬಂದುದರಿಂದ ಇಲ್ಲಿನ ಅಧಿಕಾರಿಗಳು ಮುಂಜಾಗರೂಕತೆಗಾಗಿ 144ನೇ ಸೆಕ್ಷನ್‌ನ್ನು ಇಲ್ಲಿ ಜಾರಿ ಮಾಡಬೇಕಾಗಿ ಬಂತು.

ಶ್ರೀ ಎಂ. ಹೆಚ್. ಜಯಪ್ರಕಾಶ್ ನಾರಾಯಣ್.—ಗಂಗನಂದ್ರ ಎನ್ನುವುದು ಒಂದು ಸಣ್ಣ ಗ್ರಾಮ. ಇಲ್ಲಿನ ಗ್ರಾಮದಲ್ಲಿ ಪ್ರಜಾ ಸೋಷಿಯಲಿಸ್ಟ್ ಪಾರ್ಟಿಯವರು ಲೈಸನ್ಸ್ ಇಲ್ಲದೆ ನಾಟಕವಾಡುತ್ತಾರೆ ಎಂದು ಪ್ರಕಟಣೆ ಹೊರಡಿಸಿದುದರಿಂದ ಸರಕಾರದವರು ಇಷ್ಟೊಂದು ಹೆಚ್ಚು ಜನ ಪೋಲೀಸರನ್ನು ಇಲ್ಲಿ ನೇಮಿಸಿರುವುದು ಸರಿಯೇ ?

ಶ್ರೀ ವೀರೇಂದ್ರ ಪಾಟೀಲ್.—ನಾನು ಆಗಲೇ ಉತ್ತರ ಹೇಳಿವೆ. ಈ ಊರಿನಲ್ಲಿ ಎರಡು ಪಾರ್ಟಿಗಳಿದ್ದವು. ಇಲ್ಲಿ ನಾಟಕವಾಡುವಾಗ ಈ ಊರಿನವರೇ ಅಲ್ಲದೆ ಸುತ್ತಮುತ್ತಲಿನ ಊರಿನ ಜನರೂ ಅಲ್ಲಿಗೆ ನಾಟಕ ನೋಡಲು ಬರುತ್ತಾರೆ ಮತ್ತು ಇಲ್ಲಿನ ಜನತೆಯ ಶಾಂತಿಗೆ ಭಂಗ ವಾಗಬಹುದು ಎನ್ನುವ ಸೂಚನೆಗಳು ತಿಳಿದುಬಂದುದರಿಂದ ಇಲ್ಲಿ ಇರುವ ಅಧಿಕಾರಿಗಳು 144ನೇ ಸೆಕ್ಷನ್‌ನ್ನು ಉಪಯೋಗ ಮಾಡಿ ಶಾಂತಿಗೆ ಧಕ್ಕೆ ಬಾರದಂತೆ ನೋಡಿಕೊಳ್ಳಬೇಕೆಂದು ಮಾಡಿದ್ದಾರೆ.

ಶ್ರೀ ಕೆ. ಎಚ್. ರಂಗನಾಥ್.—144 ಸೆಕ್ಷನ್ ಹಾಕುವಾಗ ಆರ್ಡರಿನಲ್ಲಿ ಇಲ್ಲಿರುವ ಕಾಂಗ್ರೆಸ್ಸಿನವರಿಂದ ಗಲಾಟೆಯಾಗುತ್ತದೆ ಎಂದು ಹೇಳಿ ಆರ್ಡರು ಬರೆದಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ವೀರೇಂದ್ರ ಪಾಟೀಲ್. —ಏನು ಆರ್ಡರು ಬರೆದಿದ್ದಾರೋ ಆ ಆರ್ಡರಿನ ಪ್ರತಿ ಈಗ ನನ್ನ ಮುಂದೆ ಇಲ್ಲ.

ಶ್ರೀ ಗಂಗಾಬೋವಿ.—ಇಷ್ಟು ಸಣ್ಣ ಗ್ರಾಮದಲ್ಲಿ ಜನ ನಾಟಕವಾಡಬೇಕು ಎಂದು ಹೇಳಿದಾಗ ಇಲ್ಲಿ ಸುಮಾರು ನಾನೂರು ಜನಕ್ಕಿಂತ ಹೆಚ್ಚು ಸಂಖ್ಯೆಯಲ್ಲಿ ಬೇರೆ ಕಡೆಯಿಂದ ಪೋಲೀಸಿನವರನ್ನು ಏಕೆ ಕರೆಸಬೇಕಾಗಿತ್ತು ? ಇದರಿಂದ ಇಲ್ಲಿ ಯಾರೂ ನಾಟಕವಾಡಬಾರದು ಎಂದು ಸರಕಾರದ ಉದ್ದೇಶವಾಗಿತ್ತೇ ?

ಶ್ರೀ ವೀರೇಂದ್ರ ಪಾಟೀಲ್.—ನಾಟಕವಾಡುವ ವಿಚಾರ ಬೇರೆ. ಲೈಸನ್ಸ್ ಪಡೆದು ಯಾರು ಬೇಕಾದರೂ ನಾಟಕ ಆಡಬಹುದು. ಬೇರೆ ಕಡೆಗಳಲ್ಲಿ ಲೈಸನ್ಸ್ ಪಡೆದು ನಾಟಕವಾಡುತ್ತಿದ್ದಾರೆ. ಇದಕ್ಕೆ ಸರಕಾರ ಯಾವ ಅಡ್ಡಿಯನ್ನೂ ತರುತ್ತಿಲ್ಲ. ಆದರೆ ಇಲ್ಲಿ ಎರಡು ಪಾರ್ಟಿಗಳಿದ್ದವು ಮತ್ತು ಒಂದಕ್ಕೊಂದು ಜಗಳವಾಡುತ್ತಿದ್ದುದರಿಂದ ಇಲ್ಲಿ ನಾಟಕವಾಡಿದರೆ ಜನರ ಶಾಂತಿಗೆ ಭಂಗ ಬರಬಹುದು ಎಂದು ಇಲ್ಲಿರುವ ಸ್ಥಳೀಯ ಅಧಿಕಾರಿಗಳು 144ನೇ ಸೆಕ್ಷನ್ ಉಪಯೋಗ ಮಾಡಬೇಕೆಂದು ಇಲ್ಲಿ ಕ್ರಮ ತೆಗೆದುಕೊಳ್ಳಬೇಕಾಯಿತು.

Mr. SPEAKER.—Since the Hon. Minister concerned is not here, I hold-over Question No. 455.

Deposits by Taluk Agricultural Produce Marketing Societies

66. Sri SADASHIVAPPA PATIL (Deodurg).—

Will the Minister of State for Food and Civil Supplies be pleased to state :—

(*a*) the number of Taluk Agricultural Produce Marketing Co-operative Societies in the State ;

(SRI SADASHIVAPPA PATIL)

(*b*) the amount credited by each of them in P. D. Account (as administrative charges) per quintal of sugar and jowar ?

Sri B. VITHALDAS SHETTY (Minister of State for Food and Civil Supplies).—

(*a*) 174.

(*b*) In the case of jowar an amount of Rs. 1-50 per quintal is credited by the Taluk agents to the P. D. Account of the Deputy Commissioner concerned towards administration charges.

A similar amount is recovered towards administration charges in the case of sugar.

ಶ್ರೀ ಸದಾಶಿವಪ್ಪ ಪಾಟೀಲ್.—ಸ್ವಾಮಿ, ಈಗ ಒಂದು ಕ್ವಿಂಟಾಲಿಗೆ 55 ರೂಪಾಯಿ ಜೋಳ ವಾಗಲಿ, ಅಥವಾ ಭತ್ತವಾಗಲಿ ಪರ್ಚೇಸ್ ಮಾಡಿದಬಳಿಕ ಅದು ಮಾರ್ಕೆಟಿಗೆ ಬರುವ ಕಾಲಕ್ಕೆ, ಉದಾಹರಣೆಗೆ ಹೇಳಬೇಕಾದರೆ ಈಗ ಜೋಳ 70 ರೂಪಾಯಿಯಂತೆ ಮಾರಬೇಕಾದರೆ, ನಿಮಗೂ, ಬ್ಲಾಕ್ ಮಾರ್ಕೆಟ್ ಮಾರ್ಪಾಡಿಗೂ ಏನು ವ್ಯತ್ಯಾಸ ಇದೆ ?

2-00 P.M.

ಶ್ರೀ ಬಿ. ವಿಠ್ಠಲದಾನಶೆಟ್ಟಿ.—ತಾವು ಇಲ್ಲಿ ಪ್ರಶ್ನೆ ಕೇಳಿರುವುದು ಪರ್ಚೇಸ್ ಮಾಡುವಾಗ ಅಡ್ಮಿನಿಸ್ಟ್ರೇಷನ್ ಚಾರ್ಜಸ್ ಹೆಚ್ಚು ಪಡೆದುಕೊಳ್ಳುತ್ತಾರೆ, 6 ರೂಪಾಯಿ ಪಡೆದುಕೊಳ್ಳುತ್ತಾರೆ ಎಂದು. We are collecting Re. 1-50 paise only towards the administrative charges; 75 paise is collected towards contribution to co-operative stabilisation fund, if they are incurring losses; and the rest is collected towards transportation and godown charges and other unforseen expenses. ಇದರಲ್ಲಿ ತಪ್ಪು ಉತ್ತರ ಏನೂ ಕೊಟ್ಟಿಲ್ಲ.

ಶ್ರೀ ಸದಾಶಿವಪ್ಪ ಪಾಟೀಲ್.—ಆಡಳಿತಾತ್ಮಕ ವೆಚ್ಚಗಳ ಬಗ್ಗೆ ಒಂದೊಂದು ತಾಲ್ಲೂಕಿನಲ್ಲಿ 4 ರೂಪಾಯಿ, 6 ರೂಪಾಯಿ ತೆಗೆದುಕೊಂಡಿದ್ದಾರೆ. ಅರೀತಿ ಹೆಚ್ಚು ತೆಗೆದುಕೊಂಡಿದ್ದರೆ ಅದರ ಬಗ್ಗೆ ತಾವೇನಾದರೂ ರೈತರಿಗಾಗಲಿ, ಸಂಘಕ್ಕಾಗಲಿ, ವಾಪಸ್ಸು ಕೊಡುತ್ತೀರಾ ಮತ್ತು ಹೆಚ್ಚಿಗೆ ತೆಗೆದುಕೊಂಡಿದ್ದಲ್ಲ ಅವರಮೇರೆ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಬಿ. ವಿಠ್ಠಲದಾನಶೆಟ್ಟಿ.—ಅಡ್ಮಿನಿಸ್ಟ್ರೇಷನ್ ಛಾರ್ಜಸ್ ವಿಚಾರದ ಬಗ್ಗೆ ಹೇಳುವುದಾದರೆ 1·50 ಪೈಸೆ ಮಾತ್ರ ತೆಗೆದುಕೊಂಡಿದ್ದಾರೆ. ಹೆಚ್ಚು ತೆಗೆದುಕೊಂಡಿದ್ದರೆ ಅದನ್ನು ನನ್ನ ಅವ ಗಾಹನೆಗೆ ತಂದರೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳುತ್ತೇನೆ.

Sri G. CHANDRAKANTH.—In many places this P.D. Account is charged at the rate of Rs. 4 or Rs. 6 per quintal. May I know whether the Government will return the excess wherever collected ?

Sri B. VITTALDAS SHETTY.—You are making a mistake by mixing various charges together. We are collecting Rs. 6. Out of this Re. 1-50 only is deducted towards administrative charges; 0·75 paise is collected towards contribution to co-operative stabilisation fund, if they are incurring losses; and the rest is collected towards transportation and godown charges and other unforseen expenses.

ಶ್ರೀ ಸದಾಶಿವಪ್ಪ ಪಾಟೀಲ್.—ನಿಮ್ಮ ರೆಕ್ಕಡನುಸಾರವಾಗಿ ಎಲ್ಲ ಚಾರ್ಜುಗಳೂ ಸೇರಿ ಯಾವ ಯಾವ ಧಾನ್ಯಕ್ಕೆ ಎಷ್ಟೆಷ್ಟು ಬೀಳುತ್ತದೆ ಎನ್ನುವುದನ್ನು ಹೇಳಲಿಕ್ಕೆ ಬರುತ್ತದಯೇ ?

ಶ್ರೀ ಬಿ. ವಿಟ್ಠಲದಾಸಶೆಟ್ಟಿ.—ಒಂದು ದೊಡ್ಡ ಪಟ್ಟಿಯನ್ನೇ ಓದಬೇಕಾಗುತ್ತದೆ.

ಅಧ್ಯಕ್ಷರು.—ಮಾನ್ಯ ಮಂತ್ರಿಗಳು ಅದನ್ನು ನಂತರ ಮುಂದೆ ಇಡಬಹುದು.

ಶ್ರೀ ಎಚ್. ಬಿ. ಜ್ಯಾಲನಯ್ಯ.—ಫುಡ್ ಕಾರ್ಪೊರೇಷನ್‌ನವರು ಆಹಾರ ಸರಬರಾಜನ್ನು ಅವರ ಕೈಗೆ ತೆಗೆದುಕೊಂಡಿರುವಾಗ ಸರ್ಕಾರದ ಆಹಾರ ಇಲಾಖೆಯು ಅನೇಕ ಸಿಬ್ಬಂದಿ ವರ್ಗವನ್ನು ಕಡಮೆ ಮಾಡಿರುವುದರಿಂದ ಆಹಾರ ಖಾತೆಯನ್ನು ಮೈಸೂರು ಸರ್ಕಾರದವರು ತೆಗೆದುಹಾಕುವುದಕ್ಕೆ ಇಚ್ಚಿಸುತ್ತಾರೆಯೇ ?

ಶ್ರೀ ಬಿ. ವಿಟ್ಠಲದಾಸಶೆಟ್ಟಿ.—ಅವಶ್ಯವಿಲ್ಲದ ಅಧಿಕಾರಿ ವರ್ಗವನ್ನು ಸರ್ಕಾರ ತೆಗೆದುಹಾಕಿದೆ. ಆಹಾರದ ವಿಚಾರದಲ್ಲಿ ನಿರ್ದಿಷ್ಟವಾದ ಧೋರಣೆಯನ್ನು ಇನ್ನೂ ತನಕ ತೆಗೆದುಕೊಂಡಿಲ್ಲ.

ಶ್ರೀ ಬೋಳ ರಘುರಾಮಶೆಟ್ಟಿ.—ಬತ್ತದ ಲೆವಿಗೆ ಪರ್ಚೇಸ್ ಪ್ರೈಸ್ ಕೊಡುವುದನ್ನು ಅಕ್ರಮ ಎಂದು ರಾಜ್ಯದ ಹೈಕೋರ್ಟ್ ತೀರ್ಮಾನ ಮಾಡಿದೆ. ಇದರ ಬಗ್ಗೆ ಏನು ಕ್ರಮ ತೆಗೆದು ಕೊಳ್ಳುತ್ತೀರಿ ?

ಶ್ರೀ ಬಿ. ವಿಟ್ಠಲದಾಸಶೆಟ್ಟಿ.—ಅಕ್ರಮ ಎಂದು ತೀರ್ಮಾನ ಮಾಡಲಲ್ಲ. ಮಾರ್ಕೆಟ್ ಪ್ರೈಸ್ ಒಂದು ಇದೆ, ಕೊಡುವಂಥ ಪ್ರೈಸ್ ಅದಕ್ಕನುಗುಣವಾಗಿರುವಂತೆ ಪುನರ್‌ಪರಿಶೀಲಿಸಬೇಕು ಎಂದು ಹೈಕೋರ್ಟ್ ತೀರ್ಮಾನವಿದೆ.

SHORT NOTICE QUESTION AND ANSWER

Deputation of Reserve Police to Andhra Pradesh

5. **Sri M. NAGAPPA** (Raichur).—

Will the Chief Minister be pleased to state :—

(*a*) whether the Government of Mysore had deputed the Mysore Reserve Police to Andhra Pradesh very recently if so, the strength of Reserve Police ;

(*b*) if so, the State that has to bear the salaries and allowances and other expenditure, etc., of the said deputed Reserve Police Staff ;

(*c*) whether it is a fact that other States like Haryana, Tamil Nadu, Kerala Governments have withdrawn their forces ; if so, whether the Government of Mysore will also do so ?

Sri VEERENDRA PATIL (Chief Minister).—

(*a*) Yes. It would not be in public interest to disclose the strength of the police force.

(*b*) The expenditure will be borne by the borrowing Government.

(*c*) This Government is not aware of the action taken by the other State Governments. So far as Mysore State is concerned, the police force deputed to Andhra Pradesh has been partly withdrawn.

ಶ್ರೀ ಎಂ. ನಾಗಪ್ಪ.—ಮೈಸೂರು ಪೋಲೀಸ್ ಆಕ್ಟ್ ಮೂರನೇ ಸೆಕ್ಷನ್ ಪ್ರಕಾರ ನಮ್ಮಲ್ಲಿರುವ ಪೋಲೀಸ್ ದಳ ನಮ್ಮಲ್ಲಿ ಕೆಲಸ ಮಾಡಬೇಕೆಂದಿದೆ. ಅದನ್ನು ಬಿಟ್ಟು ಬೇರೆ ರಾಜ್ಯಗಳಿಗೆ ಸಹಿತ ಪೋಲೀಸ್ ಅಧಿಕಾರಿಗಳನ್ನು ಕಳಿಸಬಹುದು ಎನ್ನುವುದಕ್ಕೆ ಯಾವುದಾದರೂ ಕಲಮು ಇದಯೇ ?